40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೪೬. | ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ರವಿವಾರ ತಾ. 22—12—1974 | VOL. 40. No. 46.

ಭಾರತ ರಾಷ್ಟ್ರ ಉಪಾಧ್ಯಕ್ಷರು ಮಂಗಳೂರಿಗೆ

ಭಾರತದ ಉಪ ರಾಷ್ಟ್ರಪತಿ ಶ್ರೀ ಬಿ. ಡಿ. ಜತ್ತಿ ಅವರು 1975ನೇ ಜನವರಿ ತಾ. 2ರಂದು ಸಾಯಂಕಾಲ ಹೈದರಾಬಾದದಿಂದ ಮಂಗಳೂರಿಗೆ ಬರುವವರಿದ್ದು, ಇಲ್ಲಿ ಎರಡು ದಿನಗಳ ಕಾರ್ಯಕ್ರಮ ಇಟ್ಟುಕೊಂಡಿರುವರು. ತಾ.3ರಂದು ಅವರು ಧರ್ಮಸ್ಥಳದಲ್ಲಿ "ವೈಶಾಲಿ" ಎಂಬ ಹೆಸರಿನ ಅತಿಥಿಗ್ರಹವನ್ನು ಉದ್ಘಾಟಿಸುವರು. ಅದೇ ದಿನ ಸಂಜೆ ಮಂಗಳೂರು ವೆನ್‌ಲೊಕ್ ಆಸ್ಪತ್ರೆಯ, ಹೊರ ರೋಗಿಗಳ ವಿಭಾಗವನ್ನು ಉದ್ಘಾಟಿಸಿ 5.30ಕ್ಕೆ ವಿಮಾನ ಮೂಲಕ ತಿರುವನಂತಪುರಕ್ಕೆ ನಿರ್ಗಮಿಸುವರು.

ಸಹಕಾರದಿಂದಲೇ ಜನತಾ ಕಲ್ಯಾಣ

"ಜನಜೀವನವು ಉತ್ತಮಗೊಂಡು ಜನತಾ ಕಲ್ಯಾಣವಾಗಬೇಕಾದರೆ ಸಹಕಾರಿ ಚಳವಳಿಯಿಂದ ಮಾತ್ರ ಸಾಧ್ಯ" ಎಂಬುದಾಗಿ ಜಿಲ್ಲೆಯಲ್ಲಿ ಸಹಕಾರಿ ಚಳವಳಿ ಬೆಳೆದು ಬಂದ ರೀತಿಯನ್ನು ಜಿಲ್ಲೆಯ ಹಿರಿಯ ಸಹಕಾರಿ ಶ್ರೀ ಬಿ. ನಾರಾಯಣ ನಾಯಕ್ ಅವರು ಮಂಗಳೂರು ನೋರ್ತ್ ರೋಟರಿ ಕ್ಲಬ್ಬಿನ ತಾ. 17ರ ಸಾಪ್ತಾಹಿಕ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಮಾಡಿದ ಭಾಷಣದಲ್ಲಿ ಹೇಳಿದರು. ರೊ| ಎಂ. ವಿ. ಭಂಡಾರ್ಕಾರರ ಅಧ್ಯಕ್ಷತೆಯಲ್ಲಿ ಜರಗಿದ ಈ ಸಭೆಯಲ್ಲಿ ರೊಟೇರಿಯನ್ ಎಂ. ಡಿ. ಕುಡ್ವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟಿದ್ದು ರೊಟೇರಿಯನ್ ಕೆ. ಎಸ್. ಬಾಸ್ರಿಯವರು ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಹರಿಜನರಿಗೆ ಕರೆ

'ಪ್ರಜಾಪ್ರಭುತ್ವದ ತಳಹದಿಯಲ್ಲಿ ಸಮಾನ ಅವಕಾಶವಿರುವ ನಮ್ಮ ದೇಶದಲ್ಲಿ ತಮ್ಮ ನಾಗರಿಕ ಹಕ್ಕುಬಾಧ್ಯತೆಗಳಿಗಾಗಿ ಹರಿಜನ, ಗಿರಿಜನರು ಎಚ್ಚತ್ತು, ಜಾತೀಯ ವಿಂಗಡನಾ ವಿಭಿನ್ನತೆಯನ್ನು ಮರೆಯುವುದರ ಮೂಲಕ ಮಾನಸಿಕ ಪರಿವರ್ತನೆ ಹೊಂದಿ, ಧೈರ್ಯತಳೆದು, ತಾವೆಲ್ಲರೂ ಒಂದೇ ಎಂಬ ಭಾವನೆಯಿಂದ ತಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮೃದ್ಧಿಯನ್ನು ಪಡೆದು ಮುಂದುವರಿಯಬೇಕು' ಎಂಬುದಾಗಿ ಕರ್ನಾಟಕ ರಾಜ್ಯದ ಗ್ರಾಮೀಣ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಖಾತೆಯ ಸಚಿವ ಶ್ರೀ ಎನ್. ರಾಚಯ್ಯನವರು ತಾ. 21ರಂದು ಮಂಗಳೂರು ಪಿ. ವಿ. ಎಸ್. ಕಲಾಕುಂಜದಲ್ಲಿ ದ. ಕ. ಜಿಲ್ಲಾ ಹರಿಜನ–ಗಿರಿಜನ ಸಮ್ಮೇಳನದ ಸಮಾರೋಪ ಭಾಷಣ ಮಾಡುತ್ತ ಹರಿಜನ–ಗಿರಿಜನರಿಗೆ ಕರೆಯಿತ್ತರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ವಹಿಸಿದ್ದರು.

ಅಕಾಲ ನಿಧನ

ಮಂಗಳೂರು ರೊಯಲ್ ಹೆಂಡಿಕ್ರಾಫ್ಟ್ಸ ಸಂಸ್ಥೆಯ ಪಾಲುದಾರರೂ ರೊಯಲ್ ಸ್ಟುಡಿಯೊ ಮೆನೇಜರರೂ ಆಗಿದ್ದ ಶ್ರೀ ಪೆರೋಡಿ ನಾರಾಯಣ ರಾವ್ ಅವರು ತಾ. 16ರಂದು ಸಾಯಂಕಾಲ ಹೃದಯಾಘಾತದಿಂದ ತಮ್ಮ 39ನೇ ವಯಸ್ಸಿನಲ್ಲಿ ಅಕಾಲ ಮೃತ್ಯುವಶರಾದರು.

ಸಕ್ಕರೆ ಕಾರ್ಖಾನೆಗೆ ಪಾಲುಗಳ ಸಂಗ್ರಹ

ದ. ಕ. ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಶೇರುಗಳನ್ನು ಸಂಗ್ರಹಿಸುವ ಕಾರ್ಯವನ್ನು ಕಾರ್ಖಾನೆಯ ಚೀಫ್ ಪ್ರೊಮೋಟರ್ ಶ್ರೀ ಬಂಟ್ವಾಳ ನಾರಾಯಣ ನಾಯ್ಕರು ಆರಂಭಿಸಿದ್ದು, ಕುಂದಾಪುರದಲ್ಲಿ ರೂ. 15,000 ಮತ್ತು ಬಸ್ರೂರಲ್ಲಿ ರೂ. 10,000 ಶೇರು ಹಣವನ್ನು ಇಷ್ಟರಲ್ಲೇ ಸಂಗ್ರಹಿಸಿರುವರು. ಕುಂದಾಪುರ ಕೇಂದ್ರಕ್ಕೆ ರೂ. 2 ಲಕ್ಷ, ಕೋಟೇಶ್ವರ ಕೇಂದ್ರಕ್ಕೆ ರೂ. 50,000, ಬಸ್ರೂರು ಕೇಂದ್ರಕ್ಕೆ ರೂ. 1 ಲಕ್ಷ ಶೇರು ಸಂಗ್ರಹ ನಿಗದಿ ಮಾಡಲಾಗಿದ್ದು ಅದನ್ನು ಸಂಗ್ರಹಿಸುವ ಆಯಾ ಕೇಂದ್ರದ ಪ್ರಮುಖರನ್ನೊಳಗೊಂಡ ಸಮಿತಿಗಳನ್ನು ರಚಿಸಲಾಗಿದೆ.

ಯಾಂತ್ರಿಕ ದೋಣಿಯ ಆರಂಭೋತ್ಸವ

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ಕೊರ್ಪೊರೇಶನಿನವರು ಮಂಗಳೂರು ಮೀನುಗಾರಿಕಾ ಕೊಲೆಜಿನಲ್ಲಿ ರಚಿಸಲ್ಪಟ್ಟ 43½ ಅಡಿಗಳ ಯಾಂತ್ರಿಕ ದೋಣಿಯನ್ನು ನೀರಿಗಿಳಿಸುವ ಕಾರ್ಯಕ್ರಮವು ತಾ. 14ರಂದು ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ| ಎಚ್. ಆರ್. ಅರಕೇರಿ ಅವರಿಂದ ನಡೆಯಿತು. ದ.ಕ.ಜಿಲ್ಲಾ ಸಹಕಾರಿ ಮೀನು ಮಾರ್ಕೆಟಿಂಗ್ ಫೆಡರೇಶನಿನ ಅಧ್ಯಕ್ಷ ಶ್ರೀ ನಾರಾಯಣ ಉಚ್ಚಿಲ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮತ್ಸ್ಯೋದ್ಯಮಕ್ಕೆ ಸರಕಾರದ ನೆರವು

"ನಮ್ಮ ಉದ್ಯಮಗಳು ನಮ್ಮಲ್ಲೇ ಬೆಳೆದು ಬರುವುದು ನಮಗೆ ಮುಖ್ಯವಾಗಿದ್ದು, ನಮ್ಮದೇ ಆದ ಮೀನುಗಾರಿಕಾ ಉದ್ಯಮದ ಸಮಸ್ಯೆಗಳನ್ನು ನೀಗಿಸುವಲ್ಲಿ ಎಲ್ಲಾ ರೀತಿಯ ಸಹಕಾರವನ್ನು ಸರಕಾರ ನೀಡುವುದು' ಎಂಬುದಾಗಿ ಮಂತ್ರಿ ಶ್ರೀ ಎನ್. ರಾಚಯ್ಯ ಅವರು ನಿನ್ನೆ ತಾ. 21 ರಂದು ಮೈಸೂರು ಸ್ಟೇಟ್ ಸೀ ಫುಡ್ಸ್ ಕ್ಯಾನರ್ಸ್, ಫ್ರೀಜರ್ಸ್ ಎಂಡ್ ಎಕ್ಸ್‌ಪೋರ್ಟರ್ಸ್ ಎಸೋಸಿಯೇಶನಿನವರು ಮಂಗಳೂರು ಸರ್ಕ್ಯೂಟ್ ಹೌಸ್‌ದಲ್ಲಿ ಏರ್ಪಡಿಸಿದ ಸತ್ಕಾರ ಕೂಟವೊಂದರಲ್ಲಿ ಮಾತನಾಡುತ್ತ ಹೇಳಿದ್ದರು.

ಉಳ್ಳಾಲ ಸಮೀಪ ವಿದೇಶ ಮಾಲು ಪತ್ತೆ

ಮೀಸಾದನ್ವಯ ಅನೇಕ ಕಳ್ಳ ಸಾಗಾಣಿಕೆದಾರರ ಬಂಧನದ ನಂತರ ಪಶ್ಚಿಮ ಕರಾವಳಿಯಲ್ಲೇ ಬೃಹತ್ ಪ್ರಮಾಣದ್ದೆಂದು ಪರಿಗಣಿಸಲಾದ ಅಕ್ರಮ ಸಾಗಾಣಿಕೆಯ ವಿದೇಶ ಕಳ್ಳ ಮಾಲುಗಳನ್ನು ತಾ. 19ರಂದು ಮುಂಜಾನೆ ಮಂಗಳೂರಿಗೆ ಸಮೀಪದ ಉಳ್ಳಾಲದಲ್ಲಿ ಮತ್ತು ಉತ್ತರ ಕನ್ನಡದ ಕುಮಟಾ–ಶಿರಸಿ ನಡುವಣ ಕರಾವಳಿ ಭಾಗದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಚಾಣಾಕ್ಷತನದಿಂದ ಪತ್ತೆಹಚ್ಚಿದ ವಾರ್ತೆ ವರದಿಯಾಗಿದೆ. ಉಳ್ಳಾಲದಲ್ಲಿ ಅಕ್ರಮ ಸಾಗಾಣಿಕೆಗೆ ಸಿದ್ಧವಾಗಿಟ್ಟಿದ್ದ ಸುಮಾರು 40 ಕಟ್ಟು ವಿದೇಶಿ ಬಟ್ಟೆಬರೆಗಳನ್ನು ಕಸ್ಟಮ್ಸ್ ಅಧಿಕಾರಿಗಳು ಪತ್ತೆಹಚ್ಚಿ ವಶಪಡಿಸಿಕೊಂಡಿರುವರು

"ಟೆಲೆಂಟ್ಸ್ ನೈಟ್"

ಮಂಗಳೂರು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. 19ರಂದು ಪಿ. ವಿ. ಎಸ್. ಕಲಾಕುಂಜದಲ್ಲಿ ರೋ| ಡಾ| ಕೆ. ಎಸ್. ಪ್ರಭಾಕರರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ರೋಟೇರಿಯನರ ಕಲಾಪ್ರತಿಭೆಯನ್ನು ಪ್ರದರ್ಶಿಸುವ 'ಟೆಲೆಂಟ್ಸ್ ನೈಟ್' ಕಾರ್ಯಕ್ರಮ ನಡೆಯಿತು. ರೋ. ಎಂ. ಆರ್. ಪ್ರಭುಗಳ ನೇತೃತ್ವದಲ್ಲಿ ಖವಾಲಿ ಕಾರ್ಯಕ್ರಮ, ಮಧುಸೂದನ ಡಿ. ಕುಶೆ ಮತ್ತು ಶ್ರೀಮತಿ ಸರೋಜಿನಿ ಡಿ. ಕುಶೆ ಅವರ ದ್ವಂದ್ವ ಗೀತ, ರೋ. ಸುರೇಶ ಮಲ್ಯರಿಂದ ಫಿಲ್ಮ್‌ಗೀತ, ರೋ. ಯು. ವಿ. ಭಟ್ ಮತ್ತು ಶ್ರೀಮತಿ ಇಂದು ವಿ. ಭಟ್ ಅವರಿಂದ ದ್ವಂದ್ವ ಗೀತ, ರೋ. ಡಾ| ಕೆ. ಎಸ್. ಪ್ರಭಾಕರರಾಯರಿಂದ ವಾಯೊಲಿನ್ ಸೋಲೋ, ಡಾ| ಸಿ. ಆರ್. ಕಾಮತ್ ಮತ್ತು ಬಳಗದವರಿಂದ 'MISA' ಎಂಬ ಪ್ರಹಸನ ಇವು ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿದ್ದುವು.

ಮಂಡಲ ವಿಭಾಗ ಸಮ್ಮೇಳನ

ಜನಸಂಘದ ಮಂಗಳೂರು ಮಂಡಲದ ಮೂರನೇ ಡಿವಿಜನಿನ ಸರ್ವಸದಸ್ಯರ ಸಮ್ಮೇಳನವು ಇತ್ತೀಚೆಗೆ ನಗರದ ಹಿಂದಿ ಪ್ರಚಾರ ಸಮಿತಿ ಸಭಾ ಭವನದಲ್ಲಿ ಮಂಗಳೂರು ಮಂಡಲದ ಜನಸಂಘ ಅಧ್ಯಕ್ಷ ಶ್ರೀ ಪಿ. ಪುರುಷೋತ್ತಮ ಭಟ್, ಎಡ್ವೊಕೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ, ನಗರದಲ್ಲಿ ಹೆಚ್ಚುತ್ತಿರುವ ಕಳ್ಳತನ ಮತ್ತು ನೀರಿನ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ನಿರ್ಣಯಗಳು ಕೈಕೊಳ್ಳಲ್ಪಟ್ಟುವು.

ಕಾರು ಅಪಹಾರ ಯತ್ನ

ಬಿಕರ್ಣಕಟ್ಟೆಯ ನಿವಾಸಿ ಶ್ರೀ ನಾಗೇಶ ಪ್ರಭು ಎಂಬವರ ಅಂಬೆಸಡರ್ ಕಾರನ್ನು ಕುಂಟಿಕಾನದಲ್ಲಿ ನಿಲ್ಲಿಸಿದ ಕಡೆ ಅಪಹರಿಸುವ ಯತ್ನ ನಡೆದ ಘಟನೆಯೊಂದು ಇತ್ತೀಚೆಗೆ ವರದಿಯಾಗಿದೆ. ನಿಲ್ಲಿಸಿದ ಕಡೆಯಿಂದ ತುಸು ದೂರದಲ್ಲಿ ಅಪಘಾತಕ್ಕೀಡಾದ ಕಾರನ್ನು ಪೋಲೀಸರು ಪತ್ತೆ ಹಚ್ಚಿ, ಪ್ರಕರಣದ ಸಂಬಂಧ ಇಬ್ಬರನ್ನು ದಸ್ತಗಿರಿ ಮಾಡಿರುವರು.

ತುಳು ನಾಟಕ ಸ್ಪರ್ಧೆ

1975ನೇ ವರ್ಷದ ನವಭಾರತ–ತುಳು ಕೂಟ ತುಳು ನಾಟಕ–ಸ್ಪರ್ಧೆಯು 1975ನೇ ಮಾರ್ಚ್ ತಿಂಗಳ ತೃತೀಯ ವಾರದಲ್ಲಿ ಮಂಗಳೂರು ಪುರಭವನದಲ್ಲಿ ಜರಗಲಿದೆ ಎಂದು ತಿಳಿದುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ಸಹಿತ) ಹವ್ಯಾಸಿ ನಾಟಕ) ಸಂಸ್ಥೆಗಳು ಮಾತ್ರ ಈ ಸ್ಪರ್ಧೆಯಲ್ಲಿ ಭಾಗ ವಹಿಸಬಹುದಾಗಿದ್ದು ಈ ಬಾರಿಯ ಸ್ಪರ್ಧೆಯಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಿಗೆ ಮಾತ್ರ ಪ್ರವೇಶವಿರುವುದು.

● ಸಂಗೀತ ನಾಟಕ ಎಕಾಡಮಿಯು ಈ ಬಾರಿ ಗೌರವ ವೇತನ ನೀಡಲು ಆರಿಸಿದ ಮೂವರಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಒಬ್ಬರು.

● ಜಿಲ್ಲಾ ಪೋಲೀಸ್ ಅಧಿಕಾರಿಗಳ ನಿರ್ದೇಶನದ ಮೇರೆಗೆ ಪೋಲೀಸ್ ಅಧಿಕಾರಿಗಳು ಇತ್ತೀಚೆಗೆ ಮಂಗಳೂರಿನ ಕೆಲವು ಹೊಟೇಲುಗಳಿಗೆ ಮತ್ತು ಮನೆಗಳಿಗೆ ಧಾಳಿ ನಡೆಸಿ ಅನೈತಿಕ ವ್ಯವಹಾರದಲ್ಲಿ ತೊಡಗಿದ್ದ 18ರಿಂದ 25 ವರ್ಷ ಪ್ರಾಯದ ಹಲವು ತರುಣಿಯರನ್ನು ಬಂಧಿಸಿ ವಿಜಿಲೆನ್ಸ್ ಶೆಲ್ಟರಿಗೆ ಕಳಿಸಿರುವರು.

ಸಮಾಜ ಸುಧಾರಕ ಸರ್ವಜ್ಞ

(ಸರ್ವಜ್ಞಕವಿಯ ಚತುರ್ಥ ಶತಮಾನೋತ್ಸವ ಸಂದರ್ಭದಲ್ಲಿ 'ಕನ್ನಡನುಡಿ'ಯ ವಿಶೇಷ ಲೇಖನ.)

(ರಾಧಾಧವ)

(ತಾ. 15-12-'74ನೇ ಸಂಚಿಕೆಯಿಂದ ಮುಂದುವರಿದುದು)

ಭೂತಾಯಿಯ ಸೇವೆಯನ್ನು ಮಾನಮುಟ್ಟ ಮಾಡುವ, ಆಕೆಯ ಪವಿತ್ರ ಪಾದಸನ್ನಿಧಿಯಲ್ಲಿ ಪೈರುಬೆವರಿನ ಅಭಿಷೇಕಗೈದು ಜಗತ್ತಿಗೇ ಅನ್ನ ನೀಡುವ ಶಕ್ತಿಯನ್ನು ಪಡೆಯುವ ಭೂತಾಯಿಯ ನೆಚ್ಚಿನ ಕುವರ ಒಕ್ಕಲಿಗನ ಮೇಲೆ ಸರ್ವಜ್ಞನದು ಅಪಾರ ಅಭಿಮಾನ. ಅದಕ್ಕಾಗಿ ಆಳುವವರು ಒಕ್ಕಲಿಗನನ್ನು ಸುಖವಾಗಿರಿಸಿ ನೆಮ್ಮದಿಯಿಂದ ಬಾಳಲು ಅಣಿಮಾಡಿಕೊಟ್ಟರೆ, ತಾವು ಸುಖವಾಗಿರಬಹುದೆಂದು ತಿಳಿಸುತ್ತಾನೆ.

ಒಕ್ಕಲನು ನಲುಗಿಸದೆ ಲೆಕ್ಕವನು ಸಿಕ್ಕಿಸದೆ ।
ಕಕ್ಕುಲತೆಯಿಂದ ನಡೆಸುವ ಅರಸು ತಾ ।
ಚಕ್ಕಂದದಿರುವ ಸರ್ವಜ್ಞ ॥

ಭಂಡಾರತುಂಬಿ ನೀ ಬಂಡಿಯಲಿ ಹೇರುವರೆ ।
ಮಂಡಲವನಾಳಿ ಮೆರೆಯುವರೆ ಒಕ್ಕಲನು ।
ಕೊಂಡಾಡಬೇಕು ಸರ್ವಜ್ಞ ।

ಒಕ್ಕಲಿಗನಾದರೂ ತನ್ನ ಕೆಲಸದಲ್ಲಿ ಆಲಸ್ಯಗೈಯದೆ ಸಕಾಲಕ್ಕೆ ಹದವರಿತು ಉತ್ತು-ಬಿತ್ತುವುದನ್ನು ಮಾಡಬೇಕೆಂದು ಹೇಳುತ್ತಾನೆ.

ಆಲಸಿಕೆಯಲ್ಲಿರುವಂಗೆ ಕೆಲಸಲಂಬಲಿಯಿಲ್ಲ ।
ಕೆಲಸಕ್ಕೆ ಅಲಸದಿರುವಂಗೆ ಬೇರಿಂದ ॥
ಹಲಸು ಕಾತಂತೆ ಸರ್ವಜ್ಞ ॥

ಊಟದಲ್ಲಿಯೂ ಅಲ್ಲಲ್ಲಿಯ ಹವಾಮಾನಕ್ಕೆ ತಕ್ಕುದಾದುದನ್ನು ಆಯ್ಕೆ ಮಾಡಿ ಉಂಡು ನಿರೋಗಿಯಾಗಿರಬೇಕೆಂದು ಹೇಳುತ್ತಾನೆ.

ಜೋಳದಾ ಬೋನಕ್ಕೆ ಬೇಳೆಯಾ ತೊಗೆಯಾಗಿ ।
ಕಾಳೆಮ್ಮೆ ಕರೆದ ಹಯನಾಗಿ ಬೆಳವಲ ।
ಮೇಳ ನೋಡೆಂದ ಸರ್ವಜ್ಞ ॥

ನವಣೆಯ ಬೋನಕ್ಕೆ ಹವಣದ ತೊಗೆಯಾಗಿ
ಕವಡೆಗಲ್ಲಸ್ಟು ಬೆಣ್ಣೆ ಇಡಲೂಟದ ।
ಹವಣ ನೋಡೆಂದ ಸರ್ವಜ್ಞ ॥

ಒಕ್ಕಲಿಗನಿಗೆ ಮಘಾ, ಉತ್ತರಾ ಈ ಎರಡು ಮಳೆಗಳು ಅತಿ ಮುಖ್ಯ. ಈ ಹದಮಳೆಗಳು ಕೈಕೊಟ್ಟರೆ ಒಕ್ಕಲಿಗನ ಬದುಕು ಬೆಂಗಾಡೇ! ಅದಕ್ಕಾಗಿ ಒಕ್ಕಲಿಗನ ಬಗೆಗೆ ಸರ್ವಜ್ಞನ ಸಹಾನುಭೂತಿ ಹೀಗಿದೆ:

ಉತ್ತರೆಯು ಮುನಿದಿಹರೆ ಹೆತ್ತ ತಾಯ್ತೊರೆದಿಹರೆ ।
ಉತ್ತಮರು ತಪ್ಪಿ ನಡೆದರೆ ಲೋಕತಾ ॥
ನೆತ್ತ ಸಾಗುವುದು ಸರ್ವಜ್ಞ ॥

ಶಿಕ್ಷಣ

'ಮಾತೊಂದು ಮಾಣಿಕ್ಯ', 'ಆಚಾರವೇ ಸ್ವರ್ಗ' ಎಂದು ಹೇಳಿದಂತೆ ಜೀವನದಲ್ಲಿ ಸಾರ್ಥಕತೆ ಪಡೆಯಬೇಕಾದರೆ ಉತ್ತಮ ನಡತೆ ಬೇಕು. ಆ ನಡತೆ ಯೋಗ್ಯ ಶಿಕ್ಷಣದಿಂದ ಲಭಿಸುವುದು. ಸಜ್ಜನರ ಸಹವಾಸ, ಯೋಗ್ಯ ಗುರುವಿನಲ್ಲಿ ಅಭ್ಯಾಸ ಇವುಗಳಿಂದ ಮನಸ್ಸು ವಿಕಾಸ ಹೊಂದಿ ಉತ್ತಮ ಸಂಸ್ಕಾರಗಳಿಂದೊಡಗೂಡುವದು. ಅದಕ್ಕಾಗಿ ವಿದ್ಯೆ ಅತಿ ಮುಖ್ಯ. ಅದು ಪ್ರತಿಯೊಬ್ಬರಿಗೂ ಒತ್ತಾಯಪೂರ್ವಕವಾಗಿಯೇ ದೊರೆಯಬೇಕೆಂದು ಹೇಳುತ್ತಾನೆ.

ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು ।
ಬಿದ್ದಿರಲು ಬಂದು ನೋಡದ ತಾಯಿಯು ।
ಶುದ್ಧ ವೈರಿಗಳು ಸರ್ವಜ್ಞ ॥

ಬುದ್ಧಿ ಕಲಿಸುವ ಗುರುವಿನ ಯೋಗ್ಯತೆಯು ಉಚ್ಚಮಟ್ಟದ್ದಾಗಿರಬೇಕೆಂಬುದು ಆತನ ಮತ.

ತಂದೆಗೂ ಗುರುವಿಗೂ ಒಂದು ಅಂತರವುಂಟು ।
ತಂದೆ ತೋರುವನು ಸದ್ಗುರುವ ಗುರುರಾಯ ।
ಬಂಧನವ ಕಳೆವ ಸರ್ವಜ್ಞ ॥

ಶಿಷ್ಯರ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವ ಆಶೆ, ಪ್ರಲೋಭನಗಳಿಗೆ ಒಳಗಾಗದೆ ವಿದ್ಯೆಯನ್ನು ಕಲಿಸಬೇಕು. ದುರಾಸೆಯಿಂದ ಕೂಡಿದ್ದಾದರೆ ಗುರುವಿಗೆ ಅಪಖ್ಯಾತಿ ಖಂಡಿತ ಎಂದು ಹೇಳುತ್ತಾನೆ.

ಒಂದರೊಳಗೆಲ್ಲವೂ ಸಂದಿಸಿರುವವನು ಗುರು ।
ಚಂದದಿ ತೋರಿ ಕೊಡದಿರೆ ಶಿಷ್ಯನಂ ।
ಕೊಂದನೆಂದರಿಗು ಸರ್ವಜ್ಞ ।

ಹಂದಿ ಚಂದನದ ಸುಗಂಧವನು ಬಲ್ಲುದೆ ।
ಒಂದನು ತಿಳಿಯಲರಿಯದ ಗುರುವಿಗೆ ।
ನಿಂದೆಯೇ ಬಹುದು ಸರ್ವಜ್ಞ ॥

ಯೋಗ್ಯ ಗುರುವಿನಂತೆ 'ಸಚ್ಚಾರಿತ್ರ್ಯ, ಸತ್‌ಶೀಲಗಳ ಶಿಷ್ಯನೂ ಬೇಕು.

ಶ್ವಾನ ತೆಂಗಿನಕಾಯ ತಾನು ಮೆಲುಬಲ್ಲುದೆ ।
ಹೀನಮನದವನಿಗುಪದೇಶ ಎತ್ತಣದು ।
ಹಾನಿ ಕಾಣಯ್ಯ ಸರ್ವಜ್ಞ ॥

ವಿದ್ಯೆ ಇರುವವನಿಗೂ ನಿರಕ್ಷರಿಗೂ ಇರುವ ಅಂತರಕ್ಕೆ ಚೆನ್ನಾದ ಉಪಮೆ ನೀಡಿದ್ದಾನೆ.

ವಿದ್ಯೆಯುಳ್ಳವನ ಮುಖವು ಮುದ್ದುಬರುವಂತಿಕ್ಕು
ವಿದ್ಯೆ ಇಲ್ಲದವನ ಬರಿ ಮುಖ ಹಾಳೂರ ।
ಹದ್ದಿನಂತಕ್ಕು ಸರ್ವಜ್ಞ ॥

ದುರ್ವ್ಯಸನ ಬೇಡ

ಸರ್ವಜ್ಞನ ಕಾಲದಲ್ಲಿಯೂ ಜನರು ಅನೇಕ ದುಷ್ಟ ವ್ಯಸನಗಳಿಗೆ ಬಲಿಯಾಗಿ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದರು. ಅಂತಹವರನ್ನು ಕಂಡು ಅವರಿಗೆ ಸರಿಯಾದ ತಿಳುವಳಿಕೆ ನೀಡಿ ಉತ್ತಮರನ್ನಾಗಿ ಮಾಡಲು ಯತ್ನಿಸುತ್ತಿದ್ದನು. ದುಷ್ಟಚಟಗಳ ಒಂದು ಪಟ್ಟಿಯನ್ನೇ ನೀಡಿ, ಇನ್ನೊಮ್ಮೆ ಅಂತಹ ದುರಾಚಾರ ಮಾಡಬೇಡಿರೆಂದು ಉಪದೇಶಿಸಿದ್ದಾನೆ. ಮದ್ಯಪಾನ ಮೊದಲೇನೋ ಉತ್ಸಾಹ ತರಿಸುವುದು; ಆ ಬಳಿಕ ಅವಾಚ್ಯ ನುಡಿಗಳನ್ನಾಡಿಸಿ ಮರ್ಯಾದೆ ಕೆಡಿಸುವುದು, ದೇಹದಲ್ಲಿ ರೋಗರುಜಿನಗಳಾಗಿ ಮರಣವನ್ನೂ ತರಿಸುವದೆಂದು ಹೇಳಿರುವ ರೀತಿ ಹೀಗಿದೆ.

ಸುರೆಯ ಸೇವಿಸುವಂಗೆ ಸಿಂಗರವು ಪಿಡಿದಂಗೆ ।
ದೊರೆಯಲ್ಲಿ ತೇಜ ಪಡೆದಂಗೆ ಶಿರವಿಹುದು ।
ಸ್ಥಿರವಲ್ಲ ನೋಡ ಸರ್ವಜ್ಞ ॥

ಸುರೆಯ ಹಿರಿದುಂಡವಗೆ ಉರಿಯ ಮೇಲ್ಲಾಡುಕುವಗೆ ।
ಹರಿಯುವ ಹಾವ ಪರನಾರಿ ಪಿಡಿದಂಗೆ ।
ಮರಣ ಕಾಣಯ್ಯ ಸರ್ವಜ್ಞ ॥

ಮದ್ಯಪಾನದ ಅಮಲು ಹೆಚ್ಚಾಗಿ, ದೇಹವು ಸಂಕಟಕ್ಕೆ ಒಳಗಾಗುವುದನ್ನು ಹೀಗೆ ತಿಸುಳಿತ್ತಾನೆ:

ಮದ್ದ ಮೆದ್ದವನು ಪ್ರಬುದ್ಧನೆಂದೆನಬೇಡ ।
ಮದ್ದಸಂಕಟವ ಹೆಚ್ಚಿಸಲು ಹೆಡಕತ್ತ ।
ಗುದ್ದಿಕೊಳುತಿಹನು ಸರ್ವಜ್ಞ ॥

ಕುಡುಕರಿಂದ ದೂರವಿರಿ ಎಂದು ಉಪದೇಶ ನೀಡಿದ್ದಾನೆ.

ಸಿಂದಿಯನು ಸೇವಿಪನು ಹಂದಿಯಂತಿರುತಿಹನು ।
ಹಂದಿಯೊಂದಡೆ ಉಪಕಾರಿ ಕುಡುಕನು ।
ಎಂದಿಗೂ ಬೇಡ ಸರ್ವಜ್ಞ ॥

ಹೆಂಡವನು ಸುರಿಸುರಿದು ಕಂಡವರ ತಾ ಜರಿದು ।
ಬಂಡುನುಡಿಗಳನು ಸುರಿಸುತ್ತಲಿರುವವನ ।
ಕಂಡಿಹರೆ ತೊಲಗು ಸರ್ವಜ್ಞ ॥

(ಸಶೇಷ)

ಶ್ರೀಮದ್ಭಗವದ್ಗೀತೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

(ಮೂಲ ಸಂಸ್ಕೃತದಲ್ಲಿ ಮತ್ತು ತುಳುಭಾಷೆಯಲ್ಲಿ)

(ತುಳುಗೀತೆ ರಚಯಿತರು: ದಿ। ಮೂಲ್ಕಿ ನರಸಿಂಗರಾವ್, ಬಿ. ಎ., ಎಮ್. ಎಲ್.)

ಹದಿನಾರನೆಯ ಅಧ್ಯಾಯ—ದೈವಾಸುರ ಸಂಪದ್ವಿಭಾಗಯೋಗ

ಸಂಸ್ಕೃತ

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥ ೧೬ ॥

ಆತ್ಮಸಂಭಾವಿತಾಃ ಸ್ತಬ್ಧಾ ಧನಮಾನಮದಾನ್ವಿತಾಃ ।
ಯಜಂತೇ ನಾಮಯಜ್ಞೈಸ್ತೇ ದಂಭೇನಾವಿಧಿಪೂರ್ವಕಂ ॥ ೧೭ ॥

ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಚ ಸಂಶ್ರಿತಾಃ ।
ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥ ೧೮ ॥

ತಾನಹಂ ದ್ವಿಷತಃ ಕ್ರೂರಾನ್ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ ೧೯ ॥

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂಗತಿ ॥ ೨೦ ॥

ಪದಿನಾಜನೆ ಅಧ್ಯಾಯ—ದೇವಾಸುರ ಸಂಪದ್ವಿಭಾಗ ಯೋಗೊ

ತುಳು

ಇಂಚ ಕಾಮತ ಮೋಹಟಿಣ್ಣ್ ತನೇಕ ಚಿತ್ತಭ್ರಾಂತತಾ ।
ಯೋಚನೆಟ್ ತಿಕ್ಕೊಣ್ದ್‌ದೇ ನರಕೊಟು ಬೂರ್ವೆರ್ ಶುದ್ಧತಾ ॥ ೧೬ ॥

ಆತ್ಮಸಂಭಾವನೆಲ ಹಟಲಾ ಧನತ ಮದಲಾ ಇತ್ತ್‌ತ್‌ಃ ।
ದಂಭ ಪುದರಗ್ ಯಜ್ಞ ಮಳ್ಪೆರ್ ವಿಧಿವಿರೋಧನೆ ಪತ್ತ್‌ತ್ ॥ ೧೭ ॥

ಮಳ್ತ್ ಕಾಮ ಕ್ರೋಧ ಬಲ ಮದ ಅಹಂಕಾರತ ಆಶ್ರಯಾ ।
ಎನನಸೂಯೆಟ್ ದ್ವೇಷಿಪೆರ್ ನನ ಬೇತೆ ದೇಹೊಳಿಟತ್ತಯಾ ॥ ೧೮ ॥

ಇಂಚಿನಾ ದ್ವೇಷಿಳೆನ್ ಕ್ರೂರ ನರಾಧಮೆರೆನಶುಭೇರೆನ್ಃ ।
ಪಾಡ್ವೆ ಯಾನೇಪಲಾ ಆಸುರಯೋನಿಟೇ, ಸಿತವಾಹನಾ ॥ ೧೯ ॥

ಬೂತರ್ ಆಸುರಯೋನಿಟಾವೆರ್ ಮೂಢೆರ್ಃಜನ್ಮಪ್ರತೀ; ।
ಹೊಂದಯೆರ್ ಎನ್ನಾನ್, ಕಡೆಕಾ ಸೇರುವೇರಧಮಾಗತೀ ॥ ೨೦ ॥

(ಮುಂದುವರಿಯುವುದು)

ಜಪಾನ್

ಕೃಷಿಗೆ ಸ್ವಯಂಚಾಲಿತ ಯಂತ್ರ

ಜಪಾನಿನ ಕೃಷಿಯಾಂತ್ರಿಕ ಕೇಂದ್ರವು, ಬತ್ತದ ಕೃಷಿಗೆ ಸ್ವಯಂಚಾಲಿತ ಯಂತ್ರವನ್ನು ತಯಾರಿಸಿದೆ. ಇದು, ಬತ್ತವನ್ನು ನೆಡುವಲ್ಲಿಂದ ಕೊಯ್ಯುವವರೆಗಿನ ಎಲ್ಲ ಕೆಲಸಗಳನ್ನೂ ತಾನೇ ಮಾಡುತ್ತದೆ. ಜಪಾನಿನಲ್ಲಿ ಕೃಷಿಕ್ಷೇತ್ರದಲ್ಲಿ ಕಾರ್ಮಿಕರ ಕೊರತೆ ಹೆಚ್ಚುತ್ತಿದೆ; ತರುಣರು ಕೃಷಿಯನ್ನು ತೊರೆಯುತ್ತಿದ್ದಾರೆ; ಕೃಷಿಕಾರ್ಮಿಕರ ವೇತನವೂ ಹೆಚ್ಚುತ್ತಿದೆ. ಆದ್ದರಿಂದ ಈ ಯಂತ್ರದ ತಯಾರಿಗೆ ಪ್ರೇರಣೆಯಾಯಿತು. ಇದನ್ನು ಉಪಯೋಗಿಸಲು ರೈತನು ಹೆಚ್ಚಾಗಿ ಶ್ರಮಿಸಬೇಕಾಗಿಲ್ಲ. ಬರೇ ಎಣ್ಣೆ ಹೊಯ್ದು ನೋಡಿಕೊಂಡಿದ್ದರೆ ಸಾಕು. ಅದಲ್ಲದೆ, ಈ ಯಂತ್ರ ರಾತ್ರಿಯಿಡೀ ಕೆಲಸಮಾಡುತ್ತದೆ. ಸಾಮಾನ್ಯವಾಗಿ 300 ಗಂಟೆ ಹಿಡಿಯುವ ಕೆಲಸವನ್ನು 16 ಗಂಟೆಗಳಲ್ಲಿ ಇದು ಮುಗಿಸುತ್ತದೆ. 20 ಮೀಟರ್ ಉದ್ದದ ಉಕ್ಕಿನ ಅಡ್ಡ ಕಂಭಕ್ಕೆ ಹೊಂದಿಕೊಂಡು ಈ ಯಂತ್ರವು ಅತ್ತಿತ್ತ ಚಲಿಸುತ್ತದೆ. ವಿದ್ಯುತ್ ಯಂತ್ರದಿಂದ ಪ್ರೇರಿತವಾಗಿ ಇದು ಚಕ್ರಗಳ ಮೇಲೆ ಸಲೀಸಾಗಿ ಓಡಾಡುವುದು. ಹೀಗಾಗಿ, ಗದ್ದೆಯಲ್ಲಿರುವ ದೃಶ್ಯವು ಚಲಿಸುವ ಸೇತುವೆಯಂತೆ ತೋರುತ್ತದೆ. ಇಂಥ ಯಂತ್ರವನ್ನೀಗ 20 ಎಕ್ರೆಯ ಹೊಲದಲ್ಲಿ ಪ್ರಾಯೋಗಿಕವಾಗಿ ಉಪಯೋಗಿಸಲಾಗುವುದು. ಆಸ್ಟ್ರೇಲಿಯದ ಕೃಷಿ ಮತ್ತು ವಿಜ್ಞಾನ ಸಂಸ್ಥೆಯೊಂದು ತಜ್ಞರೊಬ್ಬರನ್ನು ಜಪಾನಿಗೆ ಕಳುಹಿಸಿ, ಇಂಥ ಯಂತ್ರವನ್ನು ಆಸ್ಟ್ರೇಲಿಯದ ಕಬ್ಬಿನ ಗದ್ದೆಗಳಲ್ಲಿ ಉಪಯೋಗಿಸುವ ಸಾಧ್ಯತೆಯನ್ನೂ ಪರಿಶೀಲಿಸುತ್ತಿದೆ.

ರಷ್ಯಕ್ಕೆ "ಪೈಲೆಟ್" ಪೆನ್ ಕಾರ್ಖಾನೆಯ ರವಾನೆ

ಜಪಾನಿನ "ಪೈಲೆಟ್" ನಾಮಾಂಕಿತ ಫೌಂಟನ್ ಪೆನ್ನು ಜಗದ್ವಿಖ್ಯಾತವಿದೆ. ಈ ಪೆನ್ನನ್ನು ಉತ್ಪಾದಿಸುವ ಕಾರ್ಖಾನೆಯೊಂದನ್ನು ಜಪಾನು, ರಷ್ಯಕ್ಕೆ ರಫ್ತುಮಾಡಲಿದೆ. ಈ ತರದ ರಫ್ತು ಜಗತ್ತಿನಲ್ಲಿ ಇದೇ ಮೊದಲು. ಜಪಾನು ಅದರೊಂದಿಗೆ ತಾಂತ್ರಿಕ ಜ್ಞಾನವನ್ನೂ ರವಾನಿಸಲಿದೆ. ಈ ಕಾರ್ಖಾನೆಯ ಖರ್ಚು 80 ಲಕ್ಷ ರೂಪಾಯಿ; ಸುಮಾರು 3·2 ಲಕ್ಷ ರೂಪಾಯಿ ಮೌಲ್ಯದ ಉಪಕರಣಗಳನ್ನು ರಷ್ಯವೇ ಖರೀದಿಮಾಡುವುದು. ಈ ಕಾರ್ಖಾನೆಯಲ್ಲಿ ವರ್ಷಕ್ಕೆ 14 ಮಿಲಿಯ ದಷ್ಟು ಪೆನ್‌ಗಳನ್ನು ತಯಾರಿಸುವ ವ್ಯವಸ್ಥೆಯಿದೆ. ಜಪಾನು ತಯಾರಿಸಿದ ವಸ್ತುಗಳನ್ನು ಕಮ್ಯೂನಿಸ್ಟ್ ನಾಡುಗಳಿಗೆ ಕಳಿಸುವುದು ಕಷ್ಟತರವಾದುದರಿಂದ ಈ ಈ ರೀತಿ ಕಾರ್ಖಾನೆಗಳನ್ನೇ ರಫ್ತುಮಾಡುವ ಕಾರ್ಯಕ್ರಮ ಕೈಕೊಳ್ಳಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಅಮೆರಿಕದ ಹಾಗೂ ಯುರೋಪಿನ "ಪಾರ್ಕರ್" ಮತ್ತು "ಮೊಂಟ್ ಬ್ಲಾಂಕ್" ಪೆನ್ನುಗಳ ಹಿಡಿತ ಬಿಗಿಯಾಗಿದ್ದರೂ, ಜಪಾನಿನ ಸಂಸ್ಥೆಯ ಕೌಶಲ್ಯವನ್ನು ಮೆಚ್ಚಿದ ರಷ್ಯನರು ತಮ್ಮ ಆಯ್ಕೆಯನ್ನು ಅದಕ್ಕೇ ಇತ್ತಿದ್ದಾರೆ.

ಜಪಾನಿನ ಹೊಸ ಬೆಟರಿ

ಜಪಾನಿನ ಮಟ್ಸುಹಿತಾ ಸಂಸ್ಥೆ ತಯಾರಿಸಿದ "ಲಿತಿಯಂ ಬೆಟರಿ," ಜಗತ್ತಿನಲ್ಲೇ ಅತ್ಯಧಿಕ ಶಕ್ತಿಸಂಗ್ರಹವುಳ್ಳ ಬೆಟರಿ ಎಂದು ಹೇಳಲಾಗಿದೆ. ಲಿತಿಯಂ ಭಾರವನ್ನು ತಗ್ಗಿಸುತ್ತದೆ. ರೇಡಿಯೋ, ಕೆಮರಾ, ಪ್ರಸಾರ ಉಪಕರಣಗಳಿಗೆ ಉಪಯೋಗಿಸಲು ತಕ್ಕುದಿದೆ. ಶಕ್ತಿಯ ಒತ್ತಡವು ಇತರ ಬೆಟರಿಗಳಿಗಿಂತ ಐದಾರು ಪಾಲು ಹೆಚ್ಚು.

ಹರಿವೆ ಸೊಪ್ಪಿನಿಂದ ವಿದ್ಯುತ್ತು

"ಕ್ಲೊರೊಫಿಲ್" ಎಂಬ ಸಂಯುಕ್ತ ವಸ್ತುವು ವಿದ್ಯುತ್ತನ್ನು ಹರಿಯಗೊಡಿಸುತ್ತದೆ. ಇದು ಹರಿವೆಸೊಪ್ಪಿನಲ್ಲಿಯೂ ದೊರೆಯುತ್ತದೆ. ಇದನ್ನು ಬೇರ್ಪಡಿಸುವ ಪ್ರಯೋಗವನ್ನು ಜಪಾನಿನ ಒಂದು ಪ್ರಯೋಗಶಾಲೆಯು ಜಯಪ್ರದವಾಗಿ ಮಾಡಿದೆ.

ಜಪಾನಿನ ಜನಸಂಖ್ಯೆ

ಕಳೆದ ವರ್ಷ (1974) ಮಾರ್ಚ್ ತಿಂಗಳ ಅಂತ್ಯದಲ್ಲಿ ಇಲ್ಲಿಯ ಜನಸಂಖ್ಯೆ 109,574,348; ಮನೆಗಳ ಸಂಖ್ಯೆ 32,627,792. 1973ರಲ್ಲಿದ್ದುದಕ್ಕಿಂತ ಜನಸಂಖ್ಯೆ 1974ರಲ್ಲಿ ನೇಕಡಾ 1·3 ರಷ್ಟು ಹೆಚ್ಚಿತು. ಪ್ರತೀ ಮನೆಗೆ ಸರಾಸರಿ 3·36 ಜನರಿದ್ದಂತಾಯಿತು. ಚರಿತ್ರೆಯಲ್ಲೇ ಪ್ರಥಮವೆಂಬಂತೆ ಜಪಾನಿನ ಜನರು ದೊಡ್ಡ ದೊಡ್ಡ ಪಟ್ಟಣಗಳಿಗಿಂತ ಚಿಕ್ಕ ಚಿಕ್ಕ ಪಟ್ಟಣಗಳನ್ನು ಮತ್ತು ಹಳ್ಳಿಗಳನ್ನು ಆಶ್ರಯಿಸತೊಡಗಿದ್ದಾರೆ. ——

ರಷ್ಯ

ಮಕ್ಕಳ ಪುಸ್ತಕ ಪ್ರಪಂಚ

ಮಕ್ಕಳ ಪುಸ್ತಕಪ್ರಪಂಚದಲ್ಲಿ ರಷ್ಯಕ್ಕೆ ಅಗ್ರಸ್ಥಾನವಿದೆ. ಸುಮಾರು 6000 ಮಿಲಿಯ ಪ್ರತಿಗಳಲ್ಲಿ ಮುದ್ರಿತವಾದ 90,000ಕ್ಕೂ ಹೆಚ್ಚು ಆವೃತ್ತಿಗಳನ್ನು ಪ್ರಕಟಗೊಳಿಸಿರುವ ಖ್ಯಾತಿ ಅದಕ್ಕೆ ಸಲ್ಲುತ್ತದೆ. ದೇಶದಲ್ಲಿ 70ಕ್ಕೂ ಹೆಚ್ಚು ಪ್ರಕಟಣಾಲಯಗಳು ಇಂಥ ಪುಸ್ತಕಗಳನ್ನು ಪ್ರಕಟಗೊಳಿಸುತ್ತಿವೆ. ಅವು ಪ್ರತಿವರ್ಷವೂ ಮುದ್ರಿಸುವ ಪ್ರತಿಗಳ ಸಂಖ್ಯೆ 320 ಮಿಲಿಯಕ್ಕಿಂತಲೂ ಹೆಚ್ಚು. ಯುವಜನರ ನಿಯತಕಾಲಿಕೆಗಳು ಮಾತ್ರವೇ ಅಲ್ಲದೆ, ಮಕ್ಕಳಿಗಾಗಿಯೇ 40 ನಿಯತಕಾಲಿಕೆಗಳೂ ಸುಮಾರು 30 ವಾರ್ತಾಪತ್ರಿಕೆಗಳೂ ಪ್ರಕಟಗೊಳ್ಳುತ್ತಿವೆ. ಮಕ್ಕಳ ಪ್ರಾಮುಖ್ಯ ಪತ್ರಿಕೆಯಾಗಿರುವ "ಪಯೊನೀರ್ ಸ್ಕಯಾ ಪ್ರಾವ್ದಾ" ಸುಮಾರು 10,000,000 ಪ್ರತಿಗಳಲ್ಲಿ ಪ್ರಕಟವಾಗುತ್ತಿದೆಯಾದರೆ ಜನಪ್ರಿಯ ನಿಯತಕಾಲಿಕೆ "ಮುರ್ಜಿಲ್ಕಾ"ದ ಸಂಖ್ಯೆ 5,000,000ಕ್ಕೂ ಮಿಕ್ಕಿದೆ.

ಮೊಸ್ಕೋ ನಗರಸಾರಿಗೆಯ ಐವತ್ತು ವರ್ಷಗಳು

ಮೊಸ್ಕೋನಗರದ ಬಸ್ ಸಾರಿಗೆ ವ್ಯವಸ್ಥೆಗೆ ಈಗ 50 ವರ್ಷಗಳು ತುಂಬಿದುವು. 1924ರ ಆಖ್ಯೆರು ಭಾಗದಲ್ಲಿ ಬ್ರಿಟನಿನಿಂದ ಕೊಂಡುತಂದ ಮೂರುಭಾರೀ ಲೇಲೆಂಡ್ ಬಸ್ಸುಗಳು ಮೊಸ್ಕೊ ಬೀದಿಗಳಲ್ಲಿ ಕಾಣಿಸಿಕೊಂಡುವು. ಆಗ ಇವುಗಳು ಓಡಾಡುವ ದಾರಿ ಕೇವಲ 7 ಕಿಲೋಮೀಟರು ಮಾತ್ರವೇ ಆಗಿದ್ದಿತು. ಇಂದು ಸೋವಿಯೆತ್ ರಷ್ಯದಲ್ಲೇ ತಯಾರಾದ 6500 ಬಸ್ಸುಗಳು ಮೊಸ್ಕೊ ನಗರದಲ್ಲಿ ಒಟ್ಟು 3500 ಕಿಲೋಮೀಟರ್‌ಗಳಷ್ಟು ದಾರಿಯಲ್ಲಿ ಓಡಾಡುತ್ತಿವೆ. ಸುರಂಗ ರೈಲಿನಂತೆಯೇ ರಾಜಧಾನಿಯಲ್ಲಿ ಪ್ರಯಾಣಿಕರ ಸಾಗಾಣಿಕೆಯಲ್ಲಿ ಬಸ್ಸುಗಳು ಮೊದಲ ಸ್ಥಾನ ಪಡೆಯುತ್ತವೆ. ಪ್ರತಿದಿನ ಐದು ಮಿಲಿಯ ಜನರು ಈ ಬಸ್ಸುಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಯಾವುದೇ ದೂರಕ್ಕೆ ಬಸ್ ಚಾರ್ಜು ಕೇವಲ 5 ಕೊಪೆಕ್ ಮಾತ್ರ. ಸುರಂಗರೈಲಿನಲ್ಲಿ ಇದಕ್ಕೂ ಹೆಚ್ಚು ದೂರ ಸಂಚರಿಸಬಹುದಾಗಿದ್ದರೂ ಅಲ್ಲಿ ಕೂಡ ಚಾರ್ಜು ಐದೇ ಕೊಪೆಕ್. ಕೇವಲ ಐದೇ ಕೊಪೆಕ್‌ಗಳಲ್ಲಿ 160 ಕಿಲೋಮೀಟರ್‌ಗಳ ದೀರ್ಘ ದಾರಿಯಲ್ಲಿ ಸಂಚರಿಸಬಹುದಾಗಿದೆಯೆಂಬುದನ್ನು ಕಂಡು ವಿದೇಶೀ ಅತಿಥಿಗಳಿಗೆ ತುಂಬ ಆಶ್ಚರ್ಯವಾಗುತ್ತದೆ: 97 ಸುರಂಗ ರೈಲ್ವೆ ನಿಲ್ದಾಣಗಳಲ್ಲಿ ಎಲ್ಲಿ ಬೇಕಾದಲ್ಲಿ ಇಳಿಯಬಹುದಾಗಿದೆ. ಇಷ್ಟಿದ್ದರೂ ಸುರಂಗ ರೈಲು ಲಾಭದಾಯಕವೇ ಆಗಿದೆ. ವರ್ಷವೊಂದಕ್ಕೆ ಮಿಲಿಯಗಟ್ಟಳೆ ರೂಬಲುಗಳ ಲಾಭದೊರೆಯುತ್ತದೆ. ಆದೇ ನಾಲ್ಕು ಮತ್ತು ಮೂರು ಕೊಪೆಕ್ ಚಾರ್ಜು ಇರುವ ಟ್ರೊಲ್ಲಿ ಬಸ್ಸುಗಳಿಗೂ ಟ್ರಾಮ್ ಗಾಡಿಗಳಿಗೂ ಈ ಮಾತನ್ನು ಹೇಳಲಿಕ್ಕಾಗುವುದಿಲ್ಲ. ಇವುಗಳಿಂದ ಲಾಭ ದೊರೆಯುವುದಿಲ್ಲ. ಆದರೆ, ವಿಶಾಲ ಜನೋಪಯೋಗಿ ಸಾರಿಗೆ ವ್ಯವಸ್ಥೆಯಾಗಿ ಅವು ರಾಜ್ಯದಿಂದ ಕೊರತೆಯನ್ನು ತುಂಬಿಕೊಳ್ಳುತ್ತವೆ. ಮೊಸ್ಕೋ ಪ್ರಯಾಣಿಕರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಟ್ರೊಲ್ಲಿ ಬಸ್ಸುಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ. ವಿಶಾಲವಾದ ಈ ವಾಹನದಲ್ಲಿ 50 ರಿಂದ 100 ಜನ ಪ್ರಯಾಣಿಕರು ಸಂಚರಿಸುತ್ತಾರೆ. ಇವುಗಳ ಒಟ್ಟು ಸಂಖ್ಯೆ 2000. ಇವು ನಗರದ ಪ್ರಧಾನ ಬೀದಿಗಳಲ್ಲೆಲ್ಲ ಓಡಾಡುತ್ತವೆ. ಇವುಗಳ

(4ನೇ ಪುಟಕ್ಕೆ ಮುಂದುವರಿದಿದೆ)

(3ನೇ ಪುಟದಿಂದ)

ಓಡಾಟದ ಒಟ್ಟು ಉದ್ದವು 650 ಕಿಲೋಮೀಟರ್. ಟ್ರೊಲ್ಲಿ ಬಸ್ಸು ವಿಶಿಷ್ಟವಾದುದು. ವಿದ್ಯುತ್ ಮೋಟಾರ್ ಕಾರಣ ಅದು ಹವೆಯನ್ನು ಮಲಿನಗೊಳಿಸುವುದಿಲ್ಲ.

ಮೌರ್ಯರ ಕಾಲದಲ್ಲಿ ಭಾರತ

ಬೊಂಗಾರ್ಡ್ ಲೆವಿನ್ (ರಷ್ಯಾ) ಅವರು ಬರೆದಿರುವ "ಮೌರ್ಯರ ಕಾಲದಲ್ಲಿ ಭಾರತ" ಎಂಬ ಪ್ರಬಂಧ ಕೃತಿ ಪ್ರಕಟವಾಗಿದೆ. ಪ್ರಾಚೀನ ಭಾರತದ ನಾನಾ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಸೋವಿಯೆತ್ ರಷ್ಯದ ಇಂಡೋಲೊಜಿಸ್ಟರು ಅನೇಕ ಅಧ್ಯಯನ ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಾಚೀನ ಭಾರತದ ಅನೇಕ ಸಾಹಿತ್ಯಕೃತಿಗಳನ್ನು ಭಾಷಾಂತರಿಸಲಾಗಿದೆ. ಸಂಸ್ಕೃತ ಸಾಹಿತ್ಯ, ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳು, ಧರ್ಮ ಹಾಗೂ ತತ್ವ ಶಾಸ್ತ್ರಗಳ ಕುರಿತೂ ಅನೇಕ ಕೃತಿಗಳು ಪ್ರಕಟಗೊಂಡಿವೆ. ಬೊಂಗಾರ್ಡ್ ಲೆವಿನ್‌ರವರ ಪುಸ್ತಕಗಳಂತೂ ಭಾರತದ ಇತಿಹಾಸದಲ್ಲಿಯ ಒಂದು ಮಹತ್ವಪೂರ್ಣ ಅವಧಿ ಸಂಬಂಧಪಟ್ಟುದಾಗಿದೆ. ಕ್ರಿ. ಪೂರ್ವ 4–2ನೇ ಶತಮಾನಗಳಲ್ಲಿ ಐಕ್ಯರಾಜ್ಯವೊಂದು ಭಾರತದಲ್ಲಿ ಸ್ಥಾಪನೆಗೊಂಡಿತ್ತು. ಇದು ಸಾಂಸ್ಕೃತಿಕ ಉತ್ಕರ್ಷದ ಕಾಲವಾಗಿದ್ದಿತು. ಸಾಕ್ಷರತೆಯು ಸರ್ವತ್ರ ಪಸರಿಸಿತ್ತು. ಜಗತ್ತಿನ ಮೂರು ಪ್ರಧಾನ ಧರ್ಮಗಳಲ್ಲಿ ಒಂದಾದ ಬೌದ್ಧ ಧರ್ಮವು ಉದಯಿಸಿದುದು ಈ ಕಾಲದಲ್ಲಿಯೇ. ಆ ಅವಧಿಯಲ್ಲಿ ಭಾರತವು ಹೊರ ರಾಜ್ಯಗಳೊಡನೆ ನಿಕಟ ಸಂಪರ್ಕಗಳನ್ನು ಸ್ಥಾಪಿಸಿಕೊಂಡಿತ್ತು.

——

ಚೀಣಾ

ಚೀಣಾ ತೈಲ ನಿರ್ಯಾತಕ ದೇಶವಾಗುವುದೇ?

ಎಂ. ಗೆಯೊರ್ಗಿಯೇವ್

ಚೀಣಾ, ಸಮೀಪ ಭವಿಷ್ಯತ್ತಿನಲ್ಲಿಯೇ ದೊಡ್ಡ ತೈಲ ನಿರ್ಯಾತುಗಾರ ದೇಶವಾಗಬಲ್ಲುದೇ?

ಚೀಣಾದಲ್ಲಿ ತೈಲದ ಬಳಕೆಯ ಪ್ರಮಾಣ ಒಟ್ಟು ಶಕ್ತಿ ಬಳಕೆಯಲ್ಲಿ ಕೇವಲ ಶೇ. 7ರಷ್ಟು ಮಾತ್ರ ಇದೆಯಾಗಿ ತಜ್ಞರುಗಳು ಹೇಳುತ್ತಾರೆ. ಏನೇ ಆದರೂ, ಸಾರಿಗೆ, ರಾಸಾಯನಿಕ ಉದ್ದಿಮೆ ಮತ್ತು ಇದರ ಶಾಖೆಗಳ ಬೆಳವಣಿಗೆಯೊಂದಿಗೆ ಖಂಡಿತವಾಗಿಯೂ ತೈಲದ ಆವಶ್ಯಕತೆ ಕೂಡ ಚೀಣದಲ್ಲಿ ಹೆಚ್ಚುವುದು. ಇದಕ್ಕೆ ಸಂಬಂಧಿಸಿದಂತೆ, ಚೀಣಾದಲ್ಲಿ ತೈಲ ಶೇಖರಣೆಯ ಪ್ರಶ್ನೆ ಉದ್ಭವಿಸುತ್ತದೆ. ತೈಲ ಉದ್ದಿಮೆ ಅಭಿವೃದ್ಧಿಯ ಕುರಿತು ಚೀಣೀ ಪತ್ರಿಕೆಗಳು ವ್ಯಾಪಕವಾಗಿ ಬರೆಯುತ್ತವೆಯಾದರೂ ಪರಿಚಿತವಾಗಿರುವ ತೈಲನಿಕ್ಷೇಪಗಳ ಕುರಿತು ಏನನ್ನೂ ಹೇಳುತ್ತಿಲ್ಲ.

ಚೀಣೀ ಆರ್ಥಿಕದ ನ್ಯೂನತೆಗೆ ಅಲ್ಪ ಪ್ರಮಾಣದ ತೈಲ ಉತ್ಪತ್ತಿಯೂ ಒಂದು ಕಾರಣವಾಗಿದೆ. ಅದು ಇತರ ಶಾಖೆಗಳ ಆವಶ್ಯಕತೆಗಳನ್ನು ಪೂರೈಸುವಷ್ಟು ಇಂಧನ ಮತ್ತು ಶಕ್ತಿ ಉತ್ಪತ್ತಿಯನ್ನೂ ಕೂಡ ಹೊಂದಿಲ್ಲ. ತೈಲ ಹುಟ್ಟುವಳಿಯ ಪ್ರಮಾಣಗಳು ಏರುವುದಂತೂ ದೂರ ಉಳಿಯಿತು. ಪ್ರತಿಯಾಗಿ ಕುಸಿಯುತ್ತಲಿವೆ. ಇದು ವಿಶೇಷವಾಗಿ ಕಳೆದ ಕೆಲವು ವರ್ಷಗಳಲ್ಲಿಯೇ ಸ್ಪಷ್ಟವಾಗಿದೆ. ಈ ರೀತಿ, 1964—1971ರಲ್ಲಿ ತೈಲ ಉತ್ಪತ್ತಿಗಳ ಸರಾಸರಿ ವಾರ್ಷಿಕ ಪ್ರಮಾಣಗಳು ಶೇ. 24·4ರಷ್ಟಾಗಿದ್ದರೆ, 1972ರಲ್ಲಿ ಅದ ಹೆಚ್ಚಳ ಕೇವಲ ಶೇ. 16ರಷ್ಟು.

ಹೀಗೆ, ಒಂದು ವಿಷಮವರ್ತುಲವೇ ನಿರ್ಮಾಣಗೊಂಡಿದೆ: ಒಂದೆಡೆ, ಆಧುನಿಕ ತೈಲ ಉದ್ದಿಮೆಯ ಅಭಿವೃದ್ಧಿಗೆ, ಔದ್ಯಮಿಕವಾಗಿ ಅಭಿವೃದ್ಧಿಗೊಂಡ ದೇಶಗಳಿಂದ ಪೂರೈಸಲ್ಪಡುವ ಸರಂಜಾಮುಗಳ ಆವಶ್ಯಕತೆ ಇದೆ. ಇನ್ನೊಂದೆಡೆ ಪತ್ರಗಳನ್ನು ವಿನಿಯೋಗಿಸಲು ಪೀಕಿಂಗ್ ನಿರಾಕರಿಸುವುದನ್ನೂ, ಬೇರೆ ದೇಶಗಳಿಗೆ ಆವಶ್ಯಕವಾದ ಸಾಮಾನು ಸರಂಜಾಮುಗಳನ್ನು ನಿರ್ಯಾತು ಮಾಡಲು ಚೀಣಾಕ್ಕೆ ಕಡಮೆ ಸಾಧ್ಯತೆಗಳಿರುವುದನ್ನೂ ನಾವು ಕಾಣುತ್ತೇವೆ.

ಆದಕ್ಕಾಗಿಯೇ, ಚೀಣದೊಂದಿಗಿನ ದ್ವಿಪಕ್ಷೀಯ ವಾಣಿಜ್ಯ ಮತ್ತು ಆರ್ಥಿಕ ಸಹಕಾರದ ಪ್ರತೀಕ್ಷೆಗಳನ್ನು ವಾಸ್ತವಿಕವಾಗಿ ವಿಮರ್ಶಿಸುತ್ತ ಪಾಶ್ಚಿಮಾತ್ಯ ವ್ಯವಹಾರಸ್ಥರು ಹೀಗೆ ನಿರ್ಣಯಕ್ಕೆ ಬರುತ್ತಾರೆ: "ಭ್ರಮೆಗಳ ಅವಧಿ" ಮುಗಿಯಿತು ಹಾಗೂ ಈ ಸಂಪರ್ಕಗಳ ಭವಿಷ್ಯತ್ತು ಅನಿಶ್ಚಿತವಾಗಿದೆ.

——

● 'ಕುಟುಂಬಯೋಜನೆಗೆ ಆತಂಕ ಒಡ್ಡುವವರ ಹಾಗೂ ಅದರ ವಿರೋಧವಾಗಿ ಪ್ರಚಾರಮಾಡುವವರ ವಿರುದ್ಧ 'ಮೀಸಾ' ಉಪಯೋಗಿಸಬೇಕು. ಎರಡು ಮಕ್ಕಳಿಗಿಂತ ಹೆಚ್ಚಿಗಿರುವ ಎಲ್ಲಾ ದಂಪತಿಗಳಿಗೂ ಸಂತಾನ ನಿರೋಧಕ ಶಸ್ತ್ರಕ್ರಿಯೆ ಕಡ್ಡಾಯಗೊಳಿಸುವಂತೆ ರಾಷ್ಟ್ರಮಟ್ಟದ ಶಾಸನವೂ ಅಗತ್ಯ" ಎಂಬುದಾಗಿ ತಾ. 14ರಂದು ಮಣಿಪಾಲದಲ್ಲಿ ಪ್ರಾರಂಭಗೊಂಡ ಅ. ಭಾ. ಪ್ರಸವ ಶಾಸ್ತ್ರಜ್ಞರ ಮತ್ತು ಸ್ತ್ರೀರೋಗ ತಜ್ಞರ 18ನೇ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾತನಾಡುತ್ತ ಡಾ| ಝವೇರಿ ಹೇಳಿದರು.

PRABHAT, KANNADA WEEKLY, MANGALORE-575001
REGD. No. KRNL-8.

To

Printed & The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.